

ರಾಮ್ ಲಾಲನ ಅಪ್ಪ ಸೋಮದೇವನನ್ನು ಮನೆಗೆ ಕರೆದು ಲೋಟದ ತುಂಬಾ ಚಹಾವನ್ನು ಕೊಡುತ್ತಾ ರಾಮ್ ಲಾಲನಿಗೂ ಅತ್ತ ದಿಲ್ಲಿಯಲ್ಲಿ ಯಾವುದಾದರೊಂದು ಕೆಲಸ ನೋಡುವಂತೆ ಕೇಳಿಕೊಂಡಿದ್ದ. ರಾಮ್ ಲಾಲನಿಗಿಂತಲೂ ಹತ್ತನ್ನೆರಡು ವರ್ಷ ದೊಡ್ಡವನಾಗಿದ್ದ ಸೋಮದೇವ ಹದಿನೈದು ವರ್ಷಗಳ ಹಿಂದೆಯೇ ದಿಲ್ಲಿಗೆ ಹೋಗಿ ಕೆಲಸಕ್ಕೆ ಸೇರಿಕೊಂಡಿದ್ದ. ವರ್ಷಕ್ಕೆರಡು ಮೂರು ಬಾರಿ ಊರಿಗೆ ಬಂದು ಕುಟುಂಬದ ಯೋಗಕ್ಷೇಮ ನೋಡಿಕೊಂಡು ಹೋಗುತ್ತಿದ್ದನಲ್ಲದೆ ಊರಿನಲ್ಲಿ ತಂದೆ ತಾಯಿಗಳಿಗೆ ಒಂದು ಚಿಕ್ಕ ಹೊಸ ಮನೆಯನ್ನೂ ಕಟ್ಟಿದ್ದ. ಮದುವೆಯಾಗಿ ಎರಡು ಮಕ್ಕಳೂ ಇದ್ದವು. ರಾಮ್ ಲಾಲನ ಅಪ್ಪನ ಮಾತಿಗೆ ಬದಲು ಹೇಳದೆ ಸೋಮದೇವ ವಾರದ ನಂತರ ತನ್ನ